ಮಳೆಗಾಲದಲ್ಲಿ ಕೃಷಿಕರು ರೇಷ್ಮೆ ಹುಳುವನ್ನು ಸಾಕಲು ಸಾಧ್ಯವಾಗದಿರುವುದರಿಂದ ಆ ಒಂದು ಋತುವಿನಲ್ಲಿ ರೇಷ್ಮೆ ಕೃಷಿಕರಿಗೆ ಆದಾಯ ಕಡಿಮೆಯಾಗಿ ತೊಂದರೆಯಾಗುತ್ತಿದೆ

ಇ) ವಾತಾವರಣದ ಶೈತ್ಯಾಂಶವನ್ನು ನಿರ್ವಹಿಸಲು ಇದ್ದಂತಹ ತಂತ್ರಜ್ಞಾನಗಳನ್ನು ರೇಷ್ಮೆ ಕೃಷಿಕರಿಗೆ ಹೇಳಿಕೊಡಲಾಗುತ್ತಿದೆ ಪ್ರತ್ಯೇಕ ಮೌಂಟಿಂಗ್ ಹಾಲ್ ನಿರ್ಮಿಸಲು ರೇಷ್ಮೆ ವರದಾನ ಯೋಜನೆಯಡಿ ಸಹಾಯಧನ ಅವಕಾಶವನ್ನು ಕಲ್ಪಿಸಲಾಗಿದ್ದು, ಇವುಗಳಲ್ಲಿ ಎಕ್ಸಾಸ್ಟ್ ಫ್ಯಾನುಗಳನ್ನು (exhaust fan) ಅಳವಡಿಸಲು ಸೂಚಿಸಲಾಗುತ್ತಿದೆ ಡಿ–ಹ್ಯುಮಿಡಿಫೈಯರ್ ತಂತ್ರಜ್ಞಾನವನ್ನು ಸಂಶೋಧನಾ ಸಂಸ್ಥೆಗಳು ಶಿಫಾರಸ್ಸು ಮಾಡಿರುವುದಿಲ್ಲ, ಡಿ–ಹ್ಯುಮಿಡಿಫೈಯರ್ ತಾಂತ್ರಿಕತೆಯು ಹುಳು ಸಾಕುವ ಮನೆಯ ಹವಾನಿಯಂತ್ರಿತ (Air conditioning) ವ್ಯವಸ್ಥೆಗೆ ಸಮನಾಗಿರುವುದಲ್ಲದೆ ವಿದ್ಯುಚ್ಛಕ್ತಿ ನಿರಂತರವಾಗಿ ಲಭ್ಯವಾಗಬೇಕಾಗುತ್ತದೆ ಮೇಲಾಗಿ ಇದರಿಂದ ಗೂಡಿನ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ ಆದ್ದರಿಂದ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್‌ಗಳಲ್ಲಿ ಹೆಚ್ಚಿನ ಗಾಳಿ ಸಂಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಎಕ್ಸಾಸ್ಟ್ ಬಳಕೆ ಹಾಗೂ ಸುಣ್ಣದ ಬಳಕೆಯಂತಹ ಕಡಿಮೆ ವೆಚ್ಚದ ತಾಂತ್ರಿಕತೆಗಳನ್ನು ಶಿಫಾರಸ್ಸು ಮಾಡಲಾಗಿದ್ದು, ಈ ಬಗ್ಗೆ ಎಲ್ಲಾ ಬೆಳೆಗಾರರಿಗೆ ತಿಳುವಳಿಕೆ ನೀಡಲಾಗುತ್ತಿದೆ

772 (1103) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಜೀವಿ ಪ್ರಮಾಣ ಪತ್ರವನ್ನು ಸರ್ಕಾರಿ ನೌಕರರಿಗೆ ಮಾತ್ರ ನೀಡುವ ಬಗ್ಗೆ ಆದೇಶವಾಗಿರುವುದು ನಿಜವೇ ,

ಆ) ಸರ್ಕಾರಿ ನೌಕರರಲ್ಲದ ಹಲವಾರು ನಾಗರೀಕರಿಗೆ ಈ ಪ್ರಮಾಣ ಪತ್ರದ ಅವಶ್ಯಕತೆಯಿಂದಾಗಿ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಸಮಾಜದ ಎಲ್ಲಾ ನಾಗರೀಕರಿಗೂ ಉತ್ತರ ಜೀವಿ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಸರ್ಕಾರದ ಗಮನಕ್ಕೆ ಬಂದಿದೆ

ಇ) ಪರಿಶೀಲಿಸಲಾಗುತ್ತಿದೆ

773 (1104) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇರೆ ಬೇರೆ ಇಲಾಖೆಗಳಿಂದ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು (ಕಲ್ಲುಕಣಿ, ಕ್ವಾರಿ ರಸ್ತೆ ನಿರ್ಮಾಣದ ಅಗಲೀಕರಣ, ಚೆಕ್ ಡ್ಯಾಂ

ನಿರ್ಮಾಣ ಮುಂತಾದವು) ತ್ವರಿತವಾಗಿ ಪೂರ್ಣಗೊಳಿಸಲು ಅರಣ್ಯ ಸಂರಕ್ಷಣೆ ಕಾಯ್ದೆಯಿಂದ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಕೂಡಲೇ ನಿವಾರಣೆ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ,

ಇ) ಈ ಬಗ್ಗೆ 'ಪವರ್ ಕಮಿಟಿ'ಯಂತಹ ಈ ನಿಟ್ಟಿನಲ್ಲಿ ಯಾವುದಾದರೂ ಸಮಿತಿಯನ್ನು ರಚನೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ,

ಈ) ಸರ್ಕಾರದ ಮುಂದಿದ್ದಲ್ಲಿ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸುವುದನ್ನು ನಿಯಂತ್ರಣಗೊಳಿಸುವ ಸಲುವಾಗಿ ಅರಣ್ಯ ಸಂರಕ್ಷಣಾ ಕಾಯ್ದೆ 1980ನ್ನು ಜಾರಿಗೊಳಿಸಿದೆ ಅಭಿವೃದ್ಧಿ ಕಾರ್ಯಕ್ರಮದ ಸಲುವಾಗಿ ಅರಣ್ಯ ಪ್ರದೇಶವನ್ನು ಅಥವಾ ಅರಣ್ಯ ಪ್ರದೇಶದಿಂದ ಕಲ್ಲು, ಜೆಲ್ಲಿ ಮುಂತಾದವುಗಳನ್ನು ಉಪಯೋಗಿಸಿಕೊಳ್ಳಲು ಅರಣ್ಯ ಸಂರಕ್ಷಣಾ ಅಧಿನಿಯಮ 1980, ಸಂಬಂಧಪಟ್ಟ ನಿಯಮಾವಳಿಗಳು, ರೀತಿ ನೀತಿ, ಮಾರ್ಗಸೂಚಿಗಳನ್ನು ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನಿವ್ವಳ ಮೌಲ್ಯವನ್ನು ಪಾವತಿಸಿಕೊಂಡು ಕೇಂದ್ರ ಸರ್ಕಾರವು ಅನುಮತಿ ನೀಡುತ್ತದೆ ಕೆಲವು ಸಾರ್ವಜನಿಕ ಉದ್ದೇಶಗಳ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಪ್ರಾದೇಶಿಕ ಕಛೇರಿಯೇ ಮಂಜೂರಾತಿ ನೀಡುತ್ತದೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ಹಾಗೂ ಇದಕ್ಕೆ ಸಂಬಂಧಿಸಿದ ನಿಯಮ ಹಾಗೂ ಮಾರ್ಗಸೂಚಿಗಳನ್ವಯ ಅಭಿವೃದ್ಧಿ ಇಲಾಖೆಗಳು ಪ್ರಸ್ತಾವನೆಯನ್ನು ಸಲ್ಲಿಸಿ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದರೆ ಅಭಿವೃದ್ಧಿ ಇಲಾಖೆಗಳು ಅಡಚಣೆ ಅನುಭವಿಸುವ ಸಾಧ್ಯತೆ ಇರುವುದಿಲ್ಲ

ಆ) ಮೇಲಿನಂತೆ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

774 (1199) ಶ್ರೀ ಮುನಿಯಪ್ಪ ಎಸ್ ಎಂ (ಚಿಕ್ಕಬಳ್ಳಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಉಪ ವಿಭಾಗ ಶೈಕ್ಷಣಿಕ ಜಿಲ್ಲಾ ಕೇಂದ್ರವಾಗಿದ್ದು, ರಸ್ತೆ ಸಾರಿಗೆ ಜಿಲ್ಲಾ ವಿಭಾಗವಾಗಿರುವುದು ಮತ್ತು ಜಿಲ್ಲಾ ಕೇಂದ್ರವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಈ ಜಿಲ್ಲಾ ಉಪ ವಿಭಾಗಕ್ಕೆ ಆರು ತಾಲ್ಲೂಕುಗಳು ಸೇರಿ, ವಿಶಾಲ ಪ್ರದೇಶವಾಗಿರುವುದರಿಂದ ಈ ಜಿಲ್ಲೆಗೆ ಅವಶ್ಯಕವಾದ ಎಲ್ಲಾ ಅನುಕೂಲತೆಗಳು ಬೇಕೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ,